ಕೊಪ್ಪಳ ತಾಲ್ಲೂಕಿನ ಮುಳುಗಡೆಯಾದ ಎಲ್ಲಾ ಗ್ರಾಮಗಳಿಗೆ ಏತ ನೀರಾವರಿ ಒದಗಿಸುವ ಬಗ್ಗೆ

೩೫೯. ಶ್ರೀ ಎಂ. ಬಿ. ದಿವಟರ್ (ಕೊಪ್ಪಳ)– ಮಾನ್ಯ ನೀರಾವರಿ, ಲೋಕೋಪಯೋಗಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಭದ್ರಾ ಜಲಾಶಯದಲ್ಲಿ ಕೊಪ್ಪಳ ತಾಲ್ಲೂಕಿನಲ್ಲಿ ಮುಳುಗಡೆಯಾದ ಗ್ರಾಮಗಳೆಷ್ಟು;

ಆ) ಮುಳುಗಡೆಯಾದ ಗ್ರಾಮಗಳಿಗೆ ಏತ ನೀರಾವರಿ ಸೌಲಭ್ಯ ಒದಗಿಸಲಾಗಿದೆಯೇ,

ಇ) ಮುಳುಗಡೆಯಾಗಿ ಏತ ನೀರಾವರಿ ಸೌಲಭ್ಯ ಪಡೆಯದ ಗ್ರಾಮಗಳಿಗೆ ಈಗಲಾದರೂ ಏತ ನೀರಾವರಿ ಸೌಲಭ್ಯ ಒದಗಿಸಲಾಗುವುದೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ೧೯ ಗ್ರಾಮಗಳು

ಆ) ತುಂಗಭದ್ರಾ ಜಲಾಶಯದ ಅಂಚಿನಿಂದ ಏತ ನೀರಾವರಿ ಯೋಜನೆಗಳ ಮೂಲಕ ಹಲವು ಮುಳುಗಡೆಯಾದ ಗ್ರಾಮಗಳ ನೀರಾವರಿ ಸೌಲಭ್ಯ ಪಡೆದಿವೆ.

ಇ) ಪರಿಶೀಲನೆಯಲ್ಲಿರುವುದಿಲ್ಲ.

ಶ್ರೀ ಎಂ ಬಿ. ದಿವಟರ್.—ನನ್ನ 'ಆ' ಪ್ರಶ್ನೆಗೆ ಉತ್ತರವಾಗಿ ೧೯ ಗ್ರಾಮಗಳು ಎಂದು ಹೇಳಿದ್ದೀರಿ. ಈ ಉತ್ತರ ಸರಿಯಿಲ್ಲವೆಂದು ಅನ್ನಿಸುತ್ತದೆ. ಸುಮಾರು ೩೫ ಹಳ್ಳಿಗಳು ತುಂಗಭದ್ರಾ ಜಲಾಶಯದಲ್ಲಿ ಮುಳುಗಡೆಯಾಗಿವೆ. ಮುಳುಗಡೆಯಾದ ಗ್ರಾಮಗಳ ರೈತರಿಗೆ ಆಗಿನ ಕಾಲದಲ್ಲಿ ಸರ್ಕಾರಿ ಪತಭೂಮಿಯನ್ನು ಪರಿಹಾರವಾಗಿ ಕೊಟ್ಟಿದ್ದಾರೆ. ಇನ್ನೂ ಕೆಲವು ಜನರಿಗೆ, ಕೆಲವು ಗ್ರಾಮಗಳಿಗೆ ಏತ ನೀರಾವರಿ ಯೋಜನೆಗಳನ್ನು ಮಾಡಿಕೊಟ್ಟಿದ್ದಾರೆ. ಇನ್ನೂ ಉಳಿದ ಸುಮಾರು ೯ ಗ್ರಾಮಗಳಿಗೆ ಏತ ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಡಲು ಸಾಧ್ಯವೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಕೊಪ್ಪಳ ತಾಲ್ಲೂಕಿನಲ್ಲಿ ಮುಳುಗಡೆಯಾಗಿರತಕ್ಕ ಗ್ರಾಮಗಳು ೧೯. ಈಗಾಗಲೇ ಏತ ನೀರಾವರಿ ಯೋಜನೆಗಳಿಂದ ಅಲ್ಲಿ ಕೆಲಸ ನಡೆಯುತ್ತಿದೆ. ಏತ ನೀರಾವರಿ ಯೋಜನೆಗಳನ್ನು ಪ್ರಾರಂಭಿಸಿದಾಗ ಆಂಧ್ರ ಸರ್ಕಾರದಿಂದ ಪ್ರತಿಭಟನೆ ಬಂದು ಎರಡೂ ಸರ್ಕಾರಗಳ ನಡುವೆ ಸಾಕಷ್ಟು ಪತ್ರವ್ಯವಹಾರವಾಗಿದೆ. ನಾವು ಉಪಯೋಗಿಸತಕ್ಕ ನೀರನ್ನು ಉಪಯೋಗಿಸಿಕೊಂಡಿದ್ದೇವೆಂದು ಸರ್ಕಾರ ನಿಲುವು ತೆಗೆದುಕೊಂಡಿದೆ. ಮುಂದೆ ಏತ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂಬ ತೀರ್ಮಾನಕ್ಕೂ ಬಂದಿದೆ.

ಶ್ರೀ ಎಂ. ಬಿ. ದಿವಟರ್.—ಏತ ನೀರಾವರಿ ಯೋಜನೆಗಳನ್ನು ಕೆಲವು ಗ್ರಾಮಗಳಿಗೆ ಒದಗಿಸಿಕೊಟ್ಟಿದ್ದಾರೆ. ಇನ್ನೂ ೮–೯ ಗ್ರಾಮಗಳಿಗೆ ಒದಗಿಸಿಕೊಡಬೇಕು. ಇಲ್ಲದಿದ್ದರೆ ಆ ಗ್ರಾಮದ ರೈತರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಮಾನ್ಯ ಸಚಿವರಿಗೆ ಒತ್ತಾಯಿಸುವುದೇನೆಂದರೆ, ೯ ಗ್ರಾಮಗಳಿಗೆ ಏತ ನೀರಾವರಿ ಯೋಜನೆಗಳನ್ನು ಒದಗಿಸಿಕೊಡುವುದು ಸರ್ಕಾರದ ನೈತಿಕ ಹೊಣೆ ಎಂದು ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ.

ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಬರತಕ್ಕ ಎಂಟನೇ ಡಿಸ್ಟ್ರಿಬ್ಯೂಟರಿ

೩೭೩. ಶ್ರೀ ಶಿವಶೇಖರಗೌಡ ಪಿರವಾಳ್ (ಶಹಪುರ).—ಮಾನ್ಯ ನೀರಾವರಿ, ಲೋಕೋಪಯೋಗಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಬರತಕ್ಕ ಡಿಸ್ಟ್ರಿಬ್ಯೂಟರಿ ಎಂಟರ ಕೆಲಸವನ್ನು ಈವರೆಗೂ ಕೈಗೊಳ್ಳದಿರುವುದಕ್ಕೆ ಕಾರಣವೇನು,

ಆ) ಮೇಲ್ಕಂಡ ಡಿಸ್ಟ್ರಿಬ್ಯೂಟರಿ ಕೆಲಸವನ್ನು ಎಂದಿನಿಂದ ಪ್ರಾರಂಭಿಸಲಾಗುವುದು ?

ಇ) ಯಾವಾಗ ಸದರಿ ಕೆಲಸವನ್ನು ಮುಗಿಸಿ ರೈತರ ಭೂಮಿಗೆ ನೀರು ಕೊಡಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಶಹಾಪುರ ಉಪ ಕಾಲುವೆಯ ಲೆನೇ ವಿತರಣಾ ನಾಲೆಯು. ವಿಶ್ವಬ್ಯಾಂಕ್ ನೆರವಿನೊಡನೆ ೧೯೭೮ರಿಂದ ೧೯೮೬ರವರೆಗೆ ಕಾರ್ಯಗತಗೊಳಿಸಲಾದ ಕೃಷ್ಣಾಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಮೊದಲ ಹಂತದಲ್ಲಿ ಸೇರಿರಲಿಲ್ಲ. ವಿಶ್ವ ಬ್ಯಾಂಕ್ ನೆರವಿನೊಡನೆ ಈಗ ಕಾರ್ಯಗತಗೊಳಿಸಲಾಗುತ್ತಿರುವ ಎರಡನೇ ಹಂತದಲ್ಲಿ ಅದು ಸೇರಿದೆ. ಈ ಕಾಮಗಾರಿಗೆ ವಿಶ್ವಬ್ಯಾಂಕ್ ನಿಯಮಾವಳಿ ಪ್ರಕಾರ ಟೆಂಡರ್‌ಗಳನ್ನು ೨೯–೧೨–೧೯೮೮ರಂದು ಸ್ವೀಕರಿಸಲಾಯಿತು. ಅತಿ ಕಡಿಮೆ ಪೊತ್ತದ ಗುತ್ತಿಗೆದಾರರು ಬಹಳ ಜಾಸ್ತಿ ದರಗಳನ್ನು ನಮೂದಿಸಿದ್ದರಿಂದ ಹಾಗೂ ವಿಶ್ವಬ್ಯಾಂಕ್‌ನವರು ಈ ಸಂಬಂಧದಲ್ಲಿ ಗುತ್ತಿಗೆದಾರರೊಡನೆ ವಾತುಕತೆಗೆ (Negotiations) ಒಪ್ಪಿರಲಿಲ್ಲವಾದ್ದರಿಂದ ಟೆಂಡರ್‌ಗಳನ್ನು ತಿರಸ್ಕರಿಸಲಾಯಿತು. ವಿಶ್ವಬ್ಯಾಂಕ್‌ನವರು ಅಂಗೀಕರಿಸಿದ ಪರಿಷ್ಕೃತ ದಾಖಲೆ ಆಧಾರದ ಮೇಲೆ ಹೊಸದಾಗಿ ಟೆಂಡರುಗಳನ್ನು ಏಪ್ರಿಲ್ ೧೯೯೦ರಲ್ಲಿ ಕರೆಯುವ ಸಂಭವವಿದೆ. ಈ ಕಾರಣಗಳಿಂದಾಗಿ ಸದರೀ ವಿತರಣಾ ನಾಲೆಯ ಕಾಮಗಾರಿಗಳನ್ನು ಪ್ರಾರಂಭಿಸಲಾಗಲಿಲ್ಲ.

ಆ) ವಿಶ್ವಬ್ಯಾಂಕ್ ನಿಯಮಾವಳಿಗಳನ್ನು ಅನುಸರಿಸಿ ಗುತ್ತಿಗೆದಾರರನ್ನು ನಿಗದಿಪಡಿಸಿದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ನವೆಂಬರ್ ೧೯೯೦ರಲ್ಲಿ ಕಾಮಗಾರಿಯನ್ನು ಪ್ರಾರಂಭಿಸುವ ಸಂಭವವಿದೆ.

ಇ) ಅಕ್ಟೋಬರ್ ೧೯೯೨ರ ಹೊತ್ತಿಗೆ ಕಾಮಗಾರಿಯನ್ನು ಪೂರ್ಣಗೊಳಿಸುವ ಸಂಭವವಿದ್ದು ೧೯೯೨ರ ಹಿಂಗಾರು ಬೆಳೆಗೆ ನೀರನ್ನು ಕೊಡುವ ಸಾಧ್ಯತೆ ಇದೆ.

ಶ್ರೀ ಶಿವಶೇಖರಗೌಡ ಶಿರವಾಳ.—ಮಾನ್ಯ ಅಧ್ಯಕ್ಷರೆ, ಶಹಪುರದ ಡಿಸ್ಟ್ರಿಬ್ಯೂಟರಿ ಎಂಟರ ಕೆಲಸವನ್ನು ಏತಕ್ಕೆ ಕೈಬಿಡಲಾಯಿತು? ಮೊದಲನೇ ಹಂತದಲ್ಲಿ ಡಿಸ್ಟ್ರಿಬ್ಯೂಟರಿ ಒಂಭತ್ತರ ಕಾರ್ಯಕ್ರಮ ಮುಕ್ತಾಯ ಹೊಂದಿದ್ದರೂ ಎಂಟನೇ ಡಿಸ್ಟ್ರಿಬ್ಯೂಟರಿಯನ್ನು ಏತಕ್ಕೆ ಕೈಬಿಡಲಾಯಿತು ಎಂಬುದು ಮೊದಲನೇ ಪ್ರಶ್ನೆ. ಟೆಂಡರ್ ಕರೆದಿದ್ದು ಟೆಂಡರ್ ಹೆಚ್ಚಿಗೆ ಇದ್ದಕಾರಣ ಮತ್ತೆ ಟೆಂಡರ್ ಕರೆದು ಕೆಲಸ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ, ನನ್ನ ಪ್ರಶ್ನೆ ಇಷ್ಟೆ. ಈ ವಿತರಣಾ ನಾಲೆಯನ್ನು ಏತಕ್ಕೆ ಕೈಬಿಡಲಾಗಿದೆ ಎಂಬುದು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಅಧ್ಯಕ್ಷರೆ, ಮೊದಲನೇ ಫೇಸ್‌ನಲ್ಲಿ ವರ್ಲ್ಡ್ ಬ್ಯಾಂಕ್‌ನವರ ಜೊತೆ ವ್ಯವಹಾರ ಮಾಡಿದಾಗ ಈ ಉಪನಾಲೆಕೈಬಿಟ್ಟುಹೋಗಿತ್ತು. ೧೯೮೮ರಲ್ಲಿ ಈ ನಾಲೆಗೆ ಟೆಂಡರ್ ಕರೆದಿದ್ದಾರೆ. ಟೆಂಡರ್ ಕರೆದಾಗ ೪೬ ಪರ್ಸೆಂಟ್ ಜಾಸ್ತಿ ದರಕ್ಕೆ ಗುತ್ತಿಗೆ ಬಂದಿದ್ದರಿಂದ ವರ್ಲ್ಡ್ ಬ್ಯಾಂಕ್‌ನವರು ಒಪ್ಪಿಕೊಳ್ಳಲಿಲ್ಲ, ರಿಜೆಕ್ಟ್ ಮಾಡಿದ್ದಾರೆ. ಪುನಃ ಕೆಲವು ಕಂಡೀಷನ್ಸ್ ಹಾಕಿ ಟೆಂಡರ್ ಕರೆಯುವುದಕ್ಕೆ ಜಾಗತಿಕ ಬ್ಯಾಂಕಿನವರು ಒಪ್ಪಿಗೆ ಕೊಟ್ಟಿದ್ದಾರೆ. ಏಪ್ರಿಲ್ ತಿಂಗಳಲ್ಲಿ ಟೆಂಡರ್ ಕರೆದು ಟೆಂಡರ್ ಕಂಡೀಷನ್ ಪ್ರಕಾರ ೧೭೫ ದಿವಸಗಳ ಕಾಲಾವಕಾಶ ಕೊಟ್ಟು ನಂತರ ಎರಡು ವರ್ಷಗಳಲ್ಲಿ ಕೆಲಸ ಪೂರ್ತಿಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆಯೆಂಬ ಮಾತನ್ನು ಈ ಸಂದರ್ಭದಲ್ಲಿ ತಿಳಿಸಿ ಬಯಸುತ್ತೇನೆ.

ಶ್ರೀ ಶಿವಶೇಖರಗೌಡ ಶಿರವಾಳ —ಎಂಟನೇ ಡಿಸ್ಟ್ರಿಬ್ಯೂಟರಿ ಕೆಲಸ ಬಿಡಲಾಗಿದೆ. ಇದಲ್ಲದೆ ಹಿಂದೆ ಆದಂಥ ಡಿಸ್ಟ್ರಿಬ್ಯೂಟರಿ ನಂಬರ್ ೪, ೫, ೬ರಲ್ಲಿ ಕೂಡ ಮೂರುನೂರು ಎಕರೆ ನಾಲ್ಕುನೂರು ಎಕರೆ, ಐದುನೂರು ಎಕರೆ ಪ್ರತಿಯೊಂದು ಹಳ್ಳಿಯಲ್ಲಿ ಬಿಟ್ಟುಹೋಗಿದೆ. ಇದರ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಸುಮಾರು ಹಳ್ಳಿಗಳಲ್ಲಿ ಕೆಲಸ ಬಿಟ್ಟಿದ್ದಾರೆ. ಅದಕ್ಕಾಗಿ ಸಚಿವರನ್ನು ಕೇಳಿಕೊಳ್ಳುತ್ತೇನೆ. ಈ ವರ್ಷವೇ ಬಜೆಟ್‌ನಲ್ಲಿ ಸೇರಿಸಿ ಈ ಕೆಲಸ ಪ್ರಾರಂಭ ಮಾಡುತ್ತೀರಾ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಮದನ ಗೋಪಾಲ ನಾಯಕ್.—ಮಾನ್ಯ ಅಧ್ಯಕ್ಷರೆ, ಈ ಉಪನಾಲೆ ೮ ಏನಿದೆ ಅದು ೧೯೭೮ರಲ್ಲೇ ಸ್ಟಾರ್ಟ್ ಆಗಿ ೧೯೯೦ರಲ್ಲಿ ಕಾರ್ಯಗತ ಆಗಬೇಕಾಗಿತ್ತು. ಇವತ್ತಿನವರೆಗೂ ಆಗಿಲ್ಲ ಎಂದು ಹೇಳಿದ್ದಾರೆ. ನೆಗೋಸಿಯೇಷನ್‌ಗೆ ಕರೆದಿದ್ದೇವೆ ಎಂದು ಹೇಳಿದ್ದಾರೆ. ಆದೇರೀತಿ ಡಿಸ್ಟ್ರಿಬ್ಯೂಟರಿ ನಂಬರ್ ೬ ಕೂಡ ಇದೇ ಪರಿಸ್ಥಿತಿಯಲ್ಲಿದೆ. ಅದು ೧೯೭೮ರಲ್ಲಿ ಪ್ರಾರಂಭವಾಗಿ ಮುಗಿಯಬೇಕಾದ ಹಂತಕ್ಕೆ ಬಂದರೂ ಕೂಡ ಅದರಲ್ಲಿ ಅವ್ಯವಹಾರವಾಗಿ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಲಕ್ಷಾಂತರ ರೂಪಾಯಿ ದುಡ್ಡು ನುಂಗಿಹಾಕಿದ್ದಾರೆ, ಆದೇರೀತಿಯಲ್ಲಿ ಡಿಸ್ಟ್ರಿಬ್ಯೂಟರಿ ೮ರಲ್ಲೂ ಕೂಡ ಆಗಿದೆ. ಅದರ ಒಗ್ಗೆ ಮಾಹಿತಿ ಇದ್ದರೆ ಒದಗಿಸುತ್ತೀರಾ? ಈ ಕೆಲಸವನ್ನು ಮಾಡಿದಂಥ ಗುತ್ತಿಗೆದಾರರು ಮತ್ತು ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುತ್ತೀರಾ ಎನ್ನುವುದನ್ನು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಅಧ್ಯಕ್ಷರೇ, ಆರನೇ ಉಪನಾಲೆಯಲ್ಲಿ ಆಗಿರತಕ್ಕ ಅವ್ಯವಹಾರದ ಬಗ್ಗೆ ಸದಸ್ಯರು ಕೇಳುತ್ತಿದ್ದಾರೆ. ಆ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ. ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

ಹೊಸನಗರದ ಕೊಡಚಾದ್ರಿ ಪ್ರಥಮ ದರ್ಜೆ ಕಾಲೇಜು ಕಟ್ಟಡದ ಬಗ್ಗೆ

೩೬೨. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ನೀರಾವರಿ, ಲೋಕೋಪಯೋಗಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸನಗರ ಕೊಡಚಾದ್ರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿಯ ಅಂದಾಜನ್ನು ಹಿಂದಿನ ಸಾಲಿನ ಆಯವ್ಯಯದಲ್ಲಿ ಸೇರಿಸಲಾಗಿದೆಯೆ?

ಆ) ಹಾಗಿದ್ದಲ್ಲಿ ವೆಚ್ಚ ಎಷ್ಟು ?

ಇ) ಕಟ್ಟಡ ನಿರ್ಮಾಣಕ್ಕೆ ಎಷ್ಟು ಕಾಲ ಬೇಕಾಗುತ್ತದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಸ್ವಾಮಿರಾವ್ ಬಿ.—ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಈ ಸಣ್ಣ ಉತ್ತರದಲ್ಲಿ ನಮಗೆ ಸಮಾಧಾನಿಯಿಷಿ ಕೊಟ್ಟರೆ ಸಾಕಾಗುವುದಿಲ್ಲ, ಸ್ವಲ್ಪ ವಿವರಗಳನ್ನು ಕೊಡಬೇಕಾಗುತ್ತದೆ. ಏಕೆಂದರೆ ನಮ್ಮ ಕ್ಷೇತ್ರದಲ್ಲಿರತಕ್ಕ ಅತಿ ಮುಖ್ಯವಾದ ವಿಷಯಗಳನ್ನು ಇಲ್ಲಿ ಕೊಟ್ಟಿರುತ್ತೇವೆ. ಎಲ್ಲದಕ್ಕೂ ಇಲ್ಲ, ಉದ್ಭವಿಸುವುದಿಲ್ಲ, ಉದ್ಭವಿಸುವುದಿಲ್ಲ ಎಂದು ಉತ್ತರ ಕೊಟ್ಟು ಇಷ್ಟರಲ್ಲೇ ಮುಗಿಸಿದರೆ ಆಗುವುದಿಲ್ಲ. ಹಿಂದಿನ ಸರ್ಕಾರ ಕೊಡಚಾದ್ರಿ ಕಾಲೇಜು ಕಟ್ಟಡವನ್ನು ಬಜೆಟ್‌ನಲ್ಲಿ ಸೇರಿಸಿದ್ದೇವೆಂದು ಹೇಳಿತ್ತು. ಅದ್ಯಾವುದೋ ಪದ್ಧತಿ ಪ್ರಕಾರ ೫೦-೬೦ಲಕ್ಷ ಗ್ರಾಂಟ್ ಆಗಿ, ೫ ಸಾವಿರ ರೂಪಾಯಿ ಟೋಕನ್ ಗ್ರಾಂಟ್ ಆಗಿ ಇಟ್ಟಿದ್ದೇವೆಂದು ಹೇಳಿದ್ದರು. ಆದರೂ ಕೆಲಸ ಪ್ರಾರಂಭ ಆಗಿಲ್ಲ, ಎಸ್ಟಿಮೇಟ್ ಆಗಿಲ್ಲ. ಆದ್ದರಿಂದ ಈಗಲಾದರೂ ಮಂತ್ರಿಗಳು ಆಶ್ವಾಸನೆ ಕೊಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಧ್ಯಕ್ಷರೆ, ಕೊಡಚಾದ್ರಿ ಪ್ರಥಮ ದರ್ಜೆ ಕಾಲೇಜಿಗೆ ೬೦ ಲಕ್ಷ ರೂಪಾಯಿಗಳ ಅಂದಾಜು ತಯಾರಾಗಿರುವುದು ನಿಜ. ಬಜೆಟ್‌ನಲ್ಲಿ ಕೇವಲ ೧ ಸಾವಿರ ರೂಪಾಯಿಗಳನ್ನು ಇಟ್ಟಿದ್ದು ಆಡಳಿತಾತ್ಮಕ ಮಂಜೂರಾತಿ ಕೊಡುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ೧೯೮೯-೯೦ರ ಬಜೆಟ್‌ನಲ್ಲಿ ಕೂಡ ಅದನ್ನು ಸೇರಿಸಲಿಲ್ಲ. ಮತ್ತು ಈ ವರ್ಷ ಹೊಸ ಆಯವ್ಯಯದಲ್ಲೂ ಸೇರಿಸುವುದಕ್ಕಾಗಲಿಲ್ಲ.

೧೦-೪೦ ಎ. ಎಂ.

ಹಣಕಾಸಿನ ಕೊರತೆ ಮತ್ತು ಇದಕ್ಕೆ ಒದಗಿಸಬೇಕಾದ ಮೂರನೇ ಒಂದು ಭಾಗದ ಹಣವನ್ನು ಇಡುವುದಕ್ಕೆ ಆಗದೇ ಇರುವುದರಿಂದ ಇದನ್ನು ಮಾಡುವುದಕ್ಕೆ ಆಗಿಲ್ಲ. ಸನ್ಮಾನ್ಯ ಸದಸ್ಯರು ಹೇಳಿದಹಾಗೆ ಇದು ಬಹಳ ಮುಖ್ಯ ಇದೆ. ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಇವತ್ತು ೪೬ ಲಕ್ಷ ರೂಪಾಯಿಗಳನ್ನು ಒಟ್ಟಿಗೆ ಕೊಡುವುದಕ್ಕೆ ಆಗದೇ ಇದ್ದರೆ ಮೊದಲ ಕಂತಾಗಿ ಅರ್ಧ ಭಾಗವನ್ನಾದರೂ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅದನ್ನು ಮಾಡಬೇಕಾದರೂ ಕೂಡಾ ೧೨ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಹಣಕಾಸಿನ ಪರಿಸ್ಥಿತಿಯ ಬಗ್ಗೆ ನಾನು ಹೇಳಿದ್ದೇನೆ. ಈ ವರ್ಷ ಮಾಡುವುದು ಕಷ್ಟವೆಂಬುದನ್ನು ಅವರ ಗಮನಕ್ಕೆ ತಂದಿದ್ದೇನೆ. ನಮ್ಮ ಹಣಕಾಸಿನ ಸ್ಥಿತಿ ಸುಧಾರಿಸಿದ ನಂತರ ಅದನ್ನು ನಾವು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.